**ಎಸ್.ಸಿ ನಂ.15/2025 ಪಿ.ಡಬ್ಲ್ಯೂ- 1(ಪುಟ್ಟಣ್ಣ @ ಕೆ ಸಿ ಪುಟ್ಟಣ್ಣಯ್ಯ)**

**ಸಾಕ್ಷಿಯನ್ನು ದಿನಾಂಕ 23.04.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಹೆಚ್ ಕೆ ಪಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ.

ಸಾಕ್ಷಿಯು ದಿಃ 10.02.2023 ರಂದು ಆದ ಆನ್‌ಡಿಮಾಂಡ್ ಪ್ರನೋಟ್ ಮತ್ತು ಹಣ ಸಂದ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ವಾದಿ ರವರು ಪ್ರತಿವಾಯವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 1 (ಎ) ಮತ್ತು 1(ಬಿ) ಎಂದು, ಸಾಕ್ಷಿಯು ಸದರಿ ದಾಖಲಾತಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುವ ಶೇಖರ್ ಮತ್ತು ಕೆಂಡಗಣ್ಣಸ್ವಾಮಿ ರವರ ಸಹಿಗಳನ್ನು ನೋಡಿ ಗುರುತಿಸಿರುತಾರೆ. ಅದೇ ರೀತಿ ಸದರಿ ದಾಖಲಾತಿ ಯನ್ನು ತಯಾರಿಸಿದ ವಕೀಲರಾದ ಮಹದೇವಪ್ಪ ನವರ ಸಹಿಯನ್ನು ನೋಡಿ ಗುರತಿಸಿರುತ್ತಾರೆ.ದಿಃ 17.07.2025 ರಂದು ವಕೀಲರ ಮುಖಾಂತರ ಪ್ರತಿವಾದಿಯವರಿಗೆ ನೀಡಿದ ನೋಟೀಸಿ ಕಛೇರಿ ಪ್ರತಿಯನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ನೋಟೀಸ್ ಕಳುಹಿಸಿದ ಬಗ್ಗೆ ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 3 ಎಂದು ತಿರಸ್ಕಾರಗೊಂಡು ಜಾರಿಯಾಗದೆ ಹಿಂದುರುಗಿದ ಒಂದು ಅಂಚೆ ಲಕೋಟೆಯನ್ನು ಒಟ್ಟಾಗಿ 4 ಎಂದು ಗುರುತಿಸಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ